# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ: 1424/10/31/2016(SB–3)**

**ದಿನಾಂಕ: 05–02–2021.**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

1) ಶ್ರೀಮತಿ ಅನಿತ ಜಿ.ಆರ್,
   ಕೋಂ ಜಿ.ಮೋಹನ್

2) ಶ್ರೀ ಜಿ.ಮೋಹನ್,
   ಬಿನ್ ಗಂಗನರಸೇಗೌಡ

ಇವರಿಬ್ಬರ ವಾಸ:

ನಂ. 17, 1ನೇ ಅಡ್ಡ ರಸ್ತೆ,
ನಾಗಪ್ಪ ಸ್ಟ್ರೀಟ್,
ಪ್ಯಾಲೇಸ್ ಗುಟ್ಟಹಳ್ಳಿ,
ಬೆಂಗಳೂರು–560 003.

## ಆದೇಶ

ದೂರುದಾರರಾದ ಶ್ರೀಮತಿ ಅನಿತಾ ಹಾಗೂ ಅವರ ಗಂಡ ಶ್ರೀ ಮೋಹನ್ ರವರು ಆಯೋಗಕ್ಕೆ ಸಲ್ಲಿಸಿರುವ ದೂರಿನಲ್ಲಿ, ಶ್ರೀ ಮೋಹನ್ ರವರ ತಂದೆ ಶ್ರೀ ಗಂಗನರಸೇಗೌಡ ಮತ್ತು ತಾಯಿ ಜಯಮ್ಮ ರವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಹಾಗೂ ಒಬ್ಬನೇ ಗಂಡು ಮಗ ಇದ್ದು, ನಾಲ್ಕೂ ಜನ ಹೆಣ್ಣು ಮಕ್ಕಳಿಗೆ ಮದುವೆಯಾಗಿರುತ್ತದೆ. ತನ್ನ ತಂದೆ ಶ್ರೀ ಗಂಗನರಸೇಗೌಡ ಮತ್ತು ತಾಯಿ ಜಯಮ್ಮ ರವರಿಗೆ ಮೋಸ ಮಾಡಿ ಅವರ ಹೆಸರಿನಲ್ಲಿರುವ ಪಿತ್ರಾರ್ಜಿತ ಆಸ್ತಿಗಳನ್ನು ದಾನ ಪತ್ರದ ಮೂಲಕ ತನ್ನ ತಂಗಿಯಾದ ಉಷಾರಂಗನಾಥರವರು ಪಡೆದಿರುತ್ತಾರೆ. ಇದರ ಬಗ್ಗೆ ದೂರುದಾರರು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಆಸ್ತಿ ಪರಬಾರೆ ಮಾಡಬಾರದೆಂದು ಹಾಗೂ ಯಥಾಸ್ಥಿತಿಯನ್ನು ಕಾಪಾಡುವಂತೆ ತಡೆಯಾಜ್ಞೆ ಪಡೆದಿರುತ್ತಾರೆ. ಆದ್ದರಿಂದ ತನ್ನ ತಂಗಿ ಉಷಾರಂಗನಾಥ ಹಾಗೂ ಆಕೆಯ ಗಂಡ ರಂಗನಾಥ ರವರು ದೂರುದಾರರ ಮನಗೆ ಹೋಗಿ ಅವರನ್ನು ಮನೆಯಿಂದ ಹೊರಹಾಕಲು,

ಶ್ರೀ ರಾಜೇಂದ್ರ ಪ್ರಸಾದ್, ಡಿವೈ.ಎಸ್.ಪಿ., (ರಂಗನಾಥ ರವರ ಅಕ್ಕನ ಮಗ) ರವರ ಹೆಸರು ಬಳಸಿ ಅವರ ಸಹಾಯದಿಂದ ದೂರುದಾರರನ್ನು ಜೈಲಿಗೆ ಕಳುಹಿಸುವುದಾಗಿ ಬೆದರಿಕೆ ಹಾಕಿದ್ದು ಹಾಗೂ ಚಾಕುವಿನಿಂದ ಇರಿದು ಕೊಲ್ಲುವುದಾಗಿ ಜೀವ ಬೆದರಿಕೆ ಒಡ್ಡಿರುತ್ತಾರೆಂಬ ಬಗ್ಗೆ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರೂ, ಸದರಿ ಠಾಣೆಯ ಇನ್ಸಪೆಕ್ಟರ್ ರವರು ಅಧಿಕಾರ ದುರುಪಯೋಗ ಮಾಡಿಕೊಂಡು ದೂರುದಾರರು ನೀಡಿದ ಯಾವುದೇ ದೂರುಗಳ ಬಗ್ಗೆ ಎದುರುದಾರರ ಮೇಲೆ ಕಾನೂನು ಕ್ರಮ ಜರುಗಿಸದೆ, ತನ್ನ ಎದುರುದಾರರು ನೀಡಿರುವ ದೂರನ್ನು ಸ್ವೀಕರಿಸಿ ತನ್ನ ಮೇಲೆ ಸಿ.ಆರ್. ನಂ. 14/2016 ರನ್ನು ದಾಖಲಿಸಿ, ತೊಂದರೆಕೊಡುತ್ತಿರುವ ಬಗ್ಗೆ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಿರುತ್ತಾರೆ.

ಈ ದೂರಿನ ಪ್ರತಿಯನ್ನು ಪೊಲೀಸ್ ಮಹಾ ನಿರ್ದೇಶಕರು, ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಇವರಿಗೆ ಸೂಕ್ತ ತನಿಖೆ ಮಾಡಿ ವರದಿಯನ್ನು ಸಲ್ಲಿಸುವಂತೆ ಕಳುಹಿಸಿದ್ದು, ಅದರಂತೆ ಸದರಿಯವರು ತಮ್ಮ ವರದಿಯೊಂದಿಗೆ ಆಯೋಗದ ಡಿ.ಎಸ್.ಪಿ. ರವರ ವರದಿ ಹಾಗೂ ಅದರ ಅನುಬಂಧಗಳನ್ನು ಸಲ್ಲಿಸಿರುತ್ತಾರೆ. ಸದರಿಯವರ ವರದಿಯ ಸಂಬಂಧಿತ ಸಾರ ಈ ಕೆಳಕಂಡಂತೆ ಇದೆ:

> "…….ಸದರಿ ವರದಿಯಲ್ಲಿ ಅರ್ಜಿದಾರರು ವೈಯ್ಯಾಲಿ ಕಾವಲ್ ಪೊಲೀಸ್ ಠಾಣೆಯಲ್ಲಿ (1) ದಿನಾಂಕ 30.12.2015 ರಂದು ನೀಡಿದ ದೂರಿನ ಮೇರೆಗೆ ದಾಖಲಾಗಿರುವ ಅರ್ಜಿ ಸಂಖ್ಯೆ 02/2016 (2) ದಿನಾಂಕ 02.01.2016ರಂದು ನೀಡಿರುವ ದೂರಿನ ಮೇರೆಗೆ ದಾಖಲಾಗಿರುವ ಅರ್ಜಿ ಸಂಖ್ಯೆ 03/2016ರಲ್ಲಿ ನಮೂದಿಕೊಂಡಿದ್ದು, ಈ ದೂರರ್ಜಿಗಳ ಬಗ್ಗೆ ಯಾವುದೇ ವಿಚಾರಣೆಯನ್ನು ಕೈಗೊಳ್ಳದೇ ಹಾಗೆಯೇ ಇರಿಸಿಕೊಂಡಿರುತ್ತಾರೆ. ನಂತರ ದೂರುದಾರರುಗಳಾದ ಶ್ರೀ. ಜಿ.ಮೋಹನ್ ಮತ್ತು ಅವರ ಪತ್ನಿ ಶ್ರೀಮತಿ ಜಿ ಅನಿತಾರವರುಗಳು ದಿನಾಂಕ 26.01.2016ರಂದು ಕೊಲೆ ಬೆದರಿಕೆಗೆ ಸಂಬಂಧಿಸಿದಂತೆ ದೂರನ್ನು ಸಲ್ಲಿಸಿಕೊಂಡಿದ್ದರೂ ಸಹ ವೈಯ್ಯಾಲಿ ಕಾವಲ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ. ಶ್ರೀಧರ್.ಕೆ ಪೂಜಾರ್ ರವರು ಈ ಬಗ್ಗೆ ಸಂಜ್ಞೇಯ ಅಪರಾಧದ ಅಡಿಯಲ್ಲಿ ಕೇಸನ್ನು ದಾಖಲಿಸದೆ ಸಾಮಾನ್ಯ ದೂರು ಅರ್ಜಿಯಂತೆ ಪರಿಗಣಿಸಿ ಠಾಣೆಯಲ್ಲಿ ಪಿಟಿಶನ್ ಸಂಖ್ಯೆ: ಪಿ2ಪಿಎಸ್/ ಪಿಟಿಶನ್/20/2016ರಲ್ಲಿ ದಾಖಲಿಸಿಕೊಂಡಿರುತ್ತಾರೆ. ಸದರಿ ವೈಯ್ಯಾಲಿಕಾವಲ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಶ್ರೀಧರ್.ಕೆ. ಪೂಜಾರ್ ರವರು ಈ ದೂರು ಅರ್ಜಿಗಳಲ್ಲಿನ ವಿಷಯಗಳ ಬಗ್ಗೆ ಗಮನ ಹರಿಸದೆ ಹಾಗೂ ಮೇಲ್ಕಂಡ 3 ದೂರುಗಳಿಗೆ ಸಂಬಂಧಿಸಿದಂತೆ ಅರ್ಜಿದಾರರನ್ನು ವಿಚಾರ ಮಾಡದೆ ಎದುರುದಾರರನ್ನು ವಿಚಾರ ಮಾಡಿ ಅರ್ಜಿದಾರರಿಗೆ ಅಂಚೆಯ ಮೂಲಕ ಹಿಂಬರಹವನ್ನು ಕಳುಹಿಸಿ ಕೊಟ್ಟಿದ್ದು, ಈ ಬಗ್ಗೆ ನಿರ್ಲಕ್ಷತನ ತೋರಿರುವುದು ಧೃಢಪಟ್ಟಿರುವುದು ವಿಚಾರಣಾ ಕಾಲದಲ್ಲಿ ಪಡೆದಿರುವ ಹೇಳಿಕೆಗಳು ಮತ್ತು ಸಂಗ್ರಹಿಸಿರುವ ದಾಖಲಾತಿಗಳಿಂದ ಧೃಢಪಟ್ಟಿರುತ್ತದೆ….."

ಪೊಲೀಸ್ ಮಹಾ ನಿರ್ದೇಶಕರು, ಮಾನವ ಹಕ್ಕುಗಳ ಆಯೋಗ, ಬೆಂಗಳೂರು ರವರ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕೆ ಕಳುಹಿಸಿದ್ದು, ದಿನಾಂಕ 26–08–2016 ರಂದು ಸದರಿಯವರು ಅವರ ಅಭಿಪ್ರಾಯವನ್ನು ಸಲ್ಲಿಸಿ, ವೈಯಾಲಿಕಾವಲ್ ಆರಕ್ಷಕ ನಿರೀಕ್ಷಕರು, ಶ್ರೀ ಶ್ರೀಧರ ಪೂಜಾರ್ ರವರ ವಿರುದ್ಧ ಕರ್ತವ್ಯ ನಿರ್ಲಕ್ಷತನಕ್ಕಾಗಿ ಅವರಿಗೆ ಶಿಕ್ಷೆ ವಿಧಿಸಿ, ಕಾನೂನು ಕ್ರಮ ಜರುಗಿಸುವಂತೆ ಪ್ರಾಸಿಕ್ಯೂಟ್ ಮಾಡುವಂತೆ ಕೋರಿರುತ್ತಾರೆ.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಎ.ಡಿ.ಜಿ.ಪಿ ಅವರ ವರದಿಯನ್ನು ಅಂಗೀಕರಿಸಿ ಪ್ರಕರಣದಲ್ಲಿ ನಿರ್ಲಕ್ಷ್ಯತನ ತೋರಿರುವ ವೈಯಾಲಿಕಾವಲ್ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರು ಶ್ರೀ ಶ್ರೀಧರ್ ಕೆ ಪೂಜಾರ್ ಅವರ ವಿರುದ್ದ ಕ್ರಮ ಜರುಗಿಸಲು, ವರದಿಯ ಪ್ರತಿಯನ್ನು ಅವರಿಗೆ ಕಳುಹಿಸಿ, ಈ ಬಗ್ಗೆ ಹೇಳುವುದೇನಾದರೂ ಇದ್ದಲ್ಲಿ ಲಿಖಿತ ಹೇಳಿಕೆ ಸಲ್ಲಿಸುವಂತೆ ಆಯೋಗದ ನಿಯಮಾವಳಿ 16 ಅಡಿ ನೋಟೀಸುಗಳನ್ನು ನೀಡಿದ್ದು, ಅದರಂತೆ ದೂರುದಾರರಿಗೂ ಆಯೋಗಕ್ಕೆ ಹಾಜರಾಗುವಂತೆ ತಿಳಿಸಿದ್ದು, ದಿನಾಂಕ 31–08–2020 ರಂದು ಆರಕ್ಷಕ ನಿರೀಕ್ಷಕರು ಶ್ರೀ ಶ್ರೀಧರ್ ಕೆ ಪೂಜಾರ್‌ರವರು ಆಯೋಗದ ಮುಂದೆ ಹಾಜರಾಗಿ, ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಲಿಖಿತ ಹೇಳಿಕೆಯ ಸಂಬಂಧಿತ ಪ್ಯಾರಾಗಳು ಈ ಕೆಳಕಂಡಂತೆ ಇದೆ:

> "....ದಿನಾಂಕ:01.01.2016 ರಂದು ದೂರುದಾರರಾದ ಶ್ರೀ ಜಿ. ಮೋಹನ್ ರವರು ನೊಂದಾಯಿತ ಅಂಚೆಯ ಮೂಲಕ ಕಳುಹಿಸಿರುವ ದೂರು ಅರ್ಜಿಯನ್ನು ಠಾಣಾ ಉಸ್ತುವಾರಿಯಲ್ಲಿದ್ದ ಶ್ರೀ ಟಿ. ವೆಂಕಟಾಚಲಯ್ಯ, ಎ.ಎಸ್.ಐ ರವರು ಸ್ವೀಕರಿಸಿದ್ದು, ದೂರುದಾರರು ತಮ್ಮ ದೂರಿನಲ್ಲಿ ತನ್ನ ತಂಗಿ ಶ್ರೀಮತಿ ಉಷಾ ರಂಗನಾಥ್ ಮತ್ತು ಅವರ ಗಂಡನಾದ ರಂಗನಾಥ್, ತಂದೆ ಗಂಗನರಸೇಗೌಡ, ತಾಯಿ ಶ್ರೀಮತಿ ಜಯಮ್ಮರವರು ತಾವು ಸ್ವತ್ತಿಗೆ ಸಂಬಂಧಿಸಿದಂತೆ ಓ.ಎಸ್. ನಂ.1703/2015 ರಲ್ಲಿ ತಡೆಯಾಜ್ಞೆ ತಂದಿದ್ದರೂ ಸಹ ಮನೆಯ ನವೀಕರಣದ ಕೆಲಸವನ್ನು ಮಾಡಿಸುತ್ತಿದ್ದಾರೆ. ಇದನ್ನು ನಿಲ್ಲಿಸಬೇಕೆಂದು ನೀಡಿರುವ ದೂರು ಅರ್ಜಿಯಾಗಿರುತ್ತದೆ. ಸದರಿ ದೂರು ಅರ್ಜಿಯನ್ನು ಸ್ವೀಕರಿಸಿ, ಠಾಣಾ ಪಿಟಿಷನ್ ನಂ. 02/2016 ರಲ್ಲಿ ನಮೂದಿಸಿಕೊಂಡು ವಿಚಾರಣೆ ಕೈಗೊಂಡಿದ್ದು, ಸಂಜ್ಞೇಯ ಅಪರಾಧ ಕಂಡುಬರದ ಪ್ರಯುಕ್ತ ಸದರಿ ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಕಾಯ್ದಿರಿಸಿದ್ದರು.
>
> ತದನಂತರದಲ್ಲಿ ಇದೇ ದೂರುದಾರರಾದ ಶ್ರೀ ಜಿ.ಮೋಹನ್‌ರವರು ಶೇಷಾದ್ರಿಪುರಂ ಉಪ ವಿಭಾಗದ ಎಸಿಪಿರವರ ಕಛೇರಿಯಲ್ಲಿ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಮತ್ತೊಂದು ದೂರು ಅರ್ಜಿಯನ್ನು ನೀಡಿದ್ದು, ಆ ಅರ್ಜಿಯನ್ನು ಟಪಾಲು ಮುಖೇನ ದಿನಾಂಕ:02.01.2016 ರಂದು ಠಾಣೆಯಲ್ಲಿ ಸ್ವೀಕರಿಸಲಾಗಿರುತ್ತದೆ.
>
> ದೂರುದಾರರು ಸದರಿ ದೂರು ಅರ್ಜಿಯಲ್ಲಿ ತಮ್ಮ ತಂದೆ ಶ್ರೀ ಗಂಗನರಸೇಗೌಡ, ತಾಯಿ ಶ್ರೀಮತಿ ಜಯಮ್ಮ, ತಂಗಿ ಉಷಾ ರಂಗನಾಥ್, ತಂಗಿಯ ಗಂಡನಾದ ರಂಗನಾಥ್ ಮತ್ತು ತನ್ನ ಚಿಕ್ಕಪ್ಪನ ಮಗ ಲಕ್ಷ್ಮಿಕಾಂತ ಇವರುಗಳು ತನಗೆ ಪಿತ್ರಾರ್ಜಿತ

ಆಸ್ತಿಯನ್ನು ನೀಡದೇ ಮೋಸ, ವಂಚನೆ ಮಾಡಿ, ಮಾನಸಿಕ ಕಿರುಕುಳವನ್ನು ನೀಡಿ ತೇಜೋವಧೆ ಮಾಡಿ ತಮ್ಮ ವಿರುದ್ದ ಪೊಲೀಸ್ ಠಾಣೆಗೆ ದೂರು ನೀಡುವುದಾಗಿ ಹೆದರಿಸಿರುತ್ತಾರೆಂದು ತಿಳಿಸಿದ್ದು, ಠಾಣಾ ಪಿಟಿಷನ್ ನಂ. 03/2016 ರಲ್ಲಿ ನಮೂದಿಸಿಕೊಂಡು ಈ ಅರ್ಜಿಯ ವಿಚಾರಣೆಯನ್ನು ಕೈಗೊಂಡಿರುತ್ತದೆ.

ದಿನಾಂಕ:27.01.2016 ರಂದು ಇದೇ ದೂರುದಾರರಾದ ಶ್ರೀ ಜಿ. ಮೋಹನ್ ಮತ್ತು ಶ್ರೀಮತಿ ಅನಿತಾ ಎಂಬುವರು ಕೊರಿಯರ್ ಮೂಲಕ ಒಂದು ದೂರು ಅರ್ಜಿಯನ್ನು ಠಾಣೆಗೆ ಕಳುಹಿಸಿಕೊಟ್ಟಿರುತ್ತಾರೆ. ಅಲ್ಲದೆ ಶೇಷಾದ್ರಿಪುರಂ ಉಪವಿಭಾಗದ ಎಸಿಪಿ ರವರ ಕಛೇರಿಗೂ ಇದರ ಇನ್ನೊಂದು ಪ್ರತಿಯನ್ನು ಸಲ್ಲಿಸಿದ್ದು, ಅದನ್ನು ಎಸಿಪಿ ರವರ ಕಛೇರಿ ಪತ್ರ ಸಂ.ಎಸ್‌ಪಿಎಸ್‌ಒ/ಜಿಎನ್‌ಎಲ್/ಪಿಟಿಷನ್/01/16 ರಲ್ಲಿ ನಮೂದಿಸಿಕೊಂಡು, ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಅರ್ಜಿದಾರರಿಗೆ ಹಿಂಬರಹ ನೀಡಿ ವರದಿಯನ್ನು ಸಲ್ಲಿಸುವಂತೆ ಆದೇಶಿಸಿದ್ದರು.

ಸದರಿ ದೂರು ಅರ್ಜಿಗಳಲ್ಲಿ ದಿನಾಂಕ:26.01.2016 ರಂದು ಬೆಳಿಗ್ಗೆ 08–30 ಗಂಟೆಗೆ ದೂರುದಾರರಾದ ಶ್ರೀ ಜಿ. ಮೋಹನ್ ಮತ್ತು ಇವರ ಪತ್ನಿಯಾದ ಶ್ರೀಮತಿ ಅನಿತಾ ರವರಿಗೆ ಶ್ರೀ ಜಿ.ಮೋಹನ್‌ರವರ ತಂಗಿ ಶ್ರೀಮತಿ ಉಷಾ ಮತ್ತು ಈಕೆಯ ಗಂಡ ರಂಗನಾಥ್‌ರವರುಗಳು ತನ್ನ ಮನೆಯ ಹತ್ತಿರ ಬಂದು ಡಿವೈಎಸ್‌ಪಿ ರಾಜೇಂದ್ರಕುಮಾರ್ ರವರ ಹೆಸರನ್ನು ಹೇಳಿ ಅವರ ಸಹಾಯದಿಂದ ನಿಮ್ಮನ್ನು ಜೈಲಿಗೆ ಕಳುಹಿಸುವುದಾಗಿಯೂ, ತಪ್ಪಿದ್ದಲ್ಲಿ ಚಾಕುವಿನಿಂದ ಇರಿದು ನಿಮ್ಮನ್ನು ಸಾಯಿಸಿ ಬಿಡುತ್ತೇನೆಂದು ಚಾಕು ತೋರಿಸಿ, ಪ್ರಾಣ ಬೆದರಿಕೆಯನ್ನು ಹಾಕಿದ್ದಲ್ಲದೇ, ತನ್ನ ತಂಗಿ ಶ್ರೀಮತಿ ಉಷಾ ತಮ್ಮ ಹೆಂಡತಿಯಾದ ಶ್ರೀಮತಿ ಅನಿತಾ ರವರನ್ನು ಕುರಿತು "ಏ ಮುಂಡೆ ಮನೆ ಖಾಲಿ ಮಾಡು, ಕೇಸನ್ನು ಹಿಂದಕ್ಕೆ ಪಡೆ ಇಲ್ಲವಾದಲ್ಲಿ ಸಾಯಿಸಿ ಬಿಡುತ್ತೇನೆಂದು" ಬೈದು ಧಮಕಿ ಹಾಕಿರುತ್ತಾರೆಂದು ಆಪಾದಿಸಿರುವ ದೂರು ಅರ್ಜಿಯಾಗಿರುತ್ತದೆ.

ಮೇಲಿನ ಎರಡೂ ಅರ್ಜಿಗಳು ಒಂದೇ ಆಗಿದ್ದರಿಂದ ಠಾಣಾ ಪಿಟಿಷನ್ ನಂ. 20/16 ರಲ್ಲಿ ನಮೂದಿಸಿಕೊಂಡು ವಿಚಾರಣೆ ಕೈಗೊಳ್ಳಲಾಗಿರುತ್ತದೆ.

ಈ ದೂರು ಅರ್ಜಿಗಳ ಎದುರು ಅರ್ಜಿದಾರರಾದ 1)ಶ್ರೀ ಗಂಗನರಸೇಗೌಡ, 2)ಶ್ರೀಮತಿ ಜಯಮ್ಮ, 3) ಶ್ರೀಮತಿ ಉಷಾ, 4)ಶ್ರೀ ರಂಗನಾಥ್, 5) ಶ್ರೀ ಲಕ್ಷ್ಮಿಕಾಂತ್ ಇವರುಗಳಿಗೆ ದಿನಾಂಕ:30.01.2016 ರಂದು ದೂರಿನ ವಿಚಾರಣೆಗೆ ಹಾಜರಾಗುವಂತೆ ಪೊಲೀಸ್ ನೋಟೀಸ್ ಅನ್ನು ಜಾರಿಗೊಳಿಸಲಾಗಿದ್ದು, ಎದುರು ಅರ್ಜಿದಾರರು ಶ್ರೀ ಲಕ್ಷ್ಮಿಕಾಂತ್ ಎಂಬುವರು ಹೊರತುಪಡಿಸಿ ಇತರೆ ಎಲ್ಲರೂ ಠಾಣೆಯಲ್ಲಿ ಹಾಜರಾಗಿದ್ದು, ಇವರುಗಳನ್ನು ದೂರಿಗೆ ಸಂಬಂಧಿಸಿದಂತೆ ವಿಚಾರಣೆ ಮಾಡಿರುತ್ತದೆ.

ಠಾಣೆಯಲ್ಲಿ ದೂರುದಾರರಾದ ಶ್ರೀ ಮೋಹನ್ ರವರು ನೀಡಿರುವ ದೂರು ಅರ್ಜಿಗಳಾದ 1)02/2016, 2)03/2016 ಮತ್ತು 3) 20/2016 ಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳು ಸ್ವತ್ತಿಗೆ ಸಂಬಂಧಿಸಿದಂತೆ ಸಿವಿಲ್ ಸ್ವರೂಪದ ಅರ್ಜಿಗಳಾಗಿದ್ದು, ಹಾಗೂ ಈ ಸ್ವತ್ತಿಗೆ ಸಂಬಂಧಿಸಿದಂತೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್.ನಂ. 17.03.2015 ರಲ್ಲಿ ವಿಚಾರಣೆ ನಡೆಯುತ್ತಿರುವುದು ಕಂಡುಬಂದಿರುತ್ತದೆ.

ಸದರಿ ದೂರು ಅರ್ಜಿಗಳ ವಿಚಾರವು ಸಿವಿಲ್ ಸ್ವರೂಪದ್ದಾಗಿದ್ದರಿಂದ ಸಿವಿಲ್ ಸ್ವರೂಪದ ಪ್ರಕರಣಗಳೆಂದು ಪರಿಗಣಿಸಿ ಸಿವಿಲ್ ನ್ಯಾಯಾಲಯದಲ್ಲಿಯೇ ಬಗೆಹರಿಸಿಕೊಳ್ಳುವಂತೆ ಹಾಗೂ ಸ್ಥಳದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ

ನೀಡದಂತೆ ನಡೆದುಕೊಳ್ಳುವಂತೆ ಹಿಂಬರಹವನ್ನು ಠಾಣಾ ಪಿಸಿ–12930 ರವರ ಮೂಲಕ ದೂರುದಾರರಿಗೆ ಜಾರಿ ಮಾಡಲು ಕಳುಹಿಸಿಕೊಟ್ಟಿದ್ದು, ನೋಟೀಸ್ ಅನ್ನು ಸ್ವೀಕರಿಸಲು ನಿರಾಕರಿಸಿರುತ್ತಾರೆ. ನಂತರ ಸದರಿ ನೋಟೀಸ್ ಅನ್ನು ನೊಂದಾಯಿತ ಅಂಚೆಯ ಮೂಲಕ ಕಳುಹಿಸಿಕೊಟ್ಟಿದ್ದು, ದಿ:28.04.2016 ರಂದು ಸ್ವೀಕರಿಸಿರುತ್ತಾರೆ.

ಅರ್ಜಿದಾರರು ನೀಡಿರುವ ಎಲ್ಲಾ ದೂರು ಅರ್ಜಿಗಳ ವಿಚಾರಣೆಯಿಂದ ಅರ್ಜಿದಾರರಾದ ಶ್ರೀ ಮೋಹನ್ ರವರು ತನ್ನ ವಯೋವೃದ್ದ ತಂದೆ, ತಾಯಿಗಳನ್ನು ಆರೈಕೆ ಮಾಡದ ಪ್ರಯುಕ್ತ 2014 ರಲ್ಲಿ ಅರ್ಜಿದಾರರ ತಾಯಿಯಾದ ಶ್ರೀಮತಿ ಜಯಮ್ಮರವರು ತಮಗೆ ಸೇರಿದ ಸ್ವಯಾರ್ಜಿತ ಆಸ್ತಿಯಾದ ನಾಗಪ್ಪ ಬೀದಿ, 1ನೇ ಕ್ರಾಸ್, ನಂ.05 ರಲ್ಲಿನ ಮನೆಯನ್ನು ತನ್ನ 4 ಜನ ಹೆಣ್ಣು ಮಕ್ಕಳಿಗೆ ಗಿಪ್ಟ್ ಡೀಡ್ ಮಾಡಿದ್ದು, ನಂತರದಲ್ಲಿ 4 ಜನ ಹೆಣ್ಣು ಮಕ್ಕಳು ಒಟ್ಟಿಗೆ ಮಾತನಾಡಿಕೊಂಡು ಜಾಯಿಂಟ್ ವೆಂಚರ್ ಅಡಿಯಲ್ಲಿ ಕಟ್ಟಡವನ್ನು ಕಟ್ಟಿಸಲು ಹೆಣ್ಣು ಮಕ್ಕಳಲ್ಲಿ ಒಬ್ಬರಾದ ಶ್ರೀಮತಿ ಉಷಾರವರ ಹೆಸರಿಗೆ ಬರೆದುಕೊಟ್ಟಿದ್ದರಿಂದ ತನಗೆ ಆಸ್ತಿಯಲ್ಲಿ ಭಾಗಾಂಶ ಸಿಗಲಿಲ್ಲವೆಂದು ಅರ್ಜಿದಾರರಾದ ಶ್ರೀ ಜಿ. ಮೋಹನ್‌ರವರು ಉದ್ದೇಶ ಪೂರ್ವಕವಾಗಿ ತನ್ನ ತಂದೆ, ತಾಯಿ, ತಂಗಿ ಹಾಗೂ ತಂಗಿಯ ಗಂಡನ ವಿರುದ್ದ ದೂರುಗಳನ್ನು ನೀಡಿರುವುದು ಕಂಡುಬಂದಿರುತ್ತದೆ. ಅಲ್ಲದೆ ತನ್ನ ತಾಯಿಯವರ ಹೆಸರಿನಲ್ಲಿದ್ದ ಆಸ್ತಿಯನ್ನು ಯಾರಿಗೂ ಪರಭಾರೆ ಮಾಡದಂತೆ ಹಾಗೂ ಕಟ್ಟಡ ಕೆಲಸ ಮಾಡದಂತೆ ಮನೆಯ ಮೇಲೆ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. ನಂ. 1703/2015 ರಲ್ಲಿ ಸಿವಿಲ್ ದಾವೆ ಹೂಡಿ ತಡೆಯಾಜ್ಞೆ ಪಡೆದಿರುವುದು ಕಂಡುಬಂದಿರುತ್ತದೆ.

ಅರ್ಜಿದಾರರು ನೀಡಿರುವ ಎಲ್ಲಾ ದೂರು ಅರ್ಜಿಗಳನ್ನು ಕೂಲಂಕುಶವಾಗಿ ವಿಚಾರಣೆ ಮಾಡಿದ್ದು, ದೂರಿನಲ್ಲಿನ ಅಂಶಗಳು ಸಿವಿಲ್ ಸ್ವರೂಪದ್ದಾಗಿದ್ದರಿಂದ ಹಾಗೂ ದೂರಿನಲ್ಲಿ ಸಂಜ್ಞೇಯ ಅಂಶಗಳು ಕಂಡು ಬರದ ಹಿನ್ನೆಲೆಯಲ್ಲಿ ಅರ್ಜಿದಾರರಿಗೆ ಹಿಂಬರವನ್ನು ನೀಡಲಾಗಿರುತ್ತದೆ.

ಈ ದೂರು ಅರ್ಜಿಗಳಿಗೆ ಸಂಬಂಧಿಸಿದಂತೆ ವೈಯಾಲಿಕಾವಲ್ ಪೊಲೀಸ್ ಠಾಣೆಯ ಪೊಲೀಸರು ತನ್ನ ದೂರುಗಳನ್ನು ಸ್ವೀಕರಿಸಿಲ್ಲವೆಂದು ಹಾಗೂ ರಂಗನಾಥ್‌ರವರ ಸಹೋದರಿಯ ಮಗನಾದ ಡಿ.ವೈ.ಎಸ್.ಪಿ ಶ್ರೀ ರಾಜೇಂದ್ರಕುಮಾರ್ ಎಂಬುವರ ಸಹಾಯದಿಂದ ವೈಯಾಲಿಕಾವಲ್ ಪೊಲೀಸ್ ಠಾಣೆಯನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ನನ್ನ ದೂರುಗಳ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಅರ್ಜಿದಾರರು ಆಪಾದನೆಗಳನ್ನು ಮಾಡಿದ್ದು, ಶ್ರೀ ರಾಜೇಂದ್ರಕುಮಾರ್, ಡಿ.ವೈ.ಎಸ್.ಪಿ ರವರು ಯಾರೆಂಬುದಾಗಲೀ, ಹಾಗೂ ಅವರು ಎಲ್ಲಿ ಕರ್ತವ್ಯ ನಿರ್ವಹಿಸಿಕೊಂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಹಾಗೂ ನನಗೆ ಈ ಬಗ್ಗೆ ಯಾರೂ ಕರ್ತವ್ಯದಲ್ಲಿ ಒತ್ತಡವನ್ನು ನೀಡಿರುವುದಿಲ್ಲ. ಶ್ರೀ ಮೋಹನ್ ರವರು ನಮ್ಮ ಠಾಣೆಯ ವಿರುದ್ದ ಮಾಡಿರುವ ಆಪಾದನೆಗಳು ಸತ್ಯಕ್ಕೆ ದೂರವಾಗಿರುತ್ತವೆ ಹಾಗೂ ದುರುದ್ದೇಶದಿಂದ ಕೂಡಿರುತ್ತವೆ.

ದಿ:29.01.2016 ರಂದು 14–30 ಗಂಟೆಯ ಸಮಯಯದಲ್ಲಿ ಶ್ರೀಮತಿ ಜಯಮ್ಮ ಅಂದರೆ ಶ್ರೀ ಜಿ. ಮೋಹನ್‌ರವರ ತಾಯಿ ರವರು ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಹಾಜರಾಗಿ ತನ್ನ ಮಗನಾದ ಜಿ. ಮೋಹನ್, ಸೊಸೆ ಶ್ರೀಮತಿ ಅನಿತಾ ಮತ್ತು ಸೊಸೆಯ ಅಕ್ಕನ ಮಗ ಹಾಗೂ ವಕೀಲರಾದ ದಿಲೀಪ್‌ಗೌಡ ರವರುಗಳು ದಿನಾಂಕ:18.01.2016 ರಂದು ರಾತ್ರಿ 09–30 ಗಂಟೆಯಲ್ಲಿ ತನಗೆ ತಕ್ಷಣವೇ ಮನೆಯನ್ನು ಬರೆದುಕೊಡುವಂತೆ ಒತ್ತಾಯಿಸಿ, ಪ್ರಾಣ ಬೆದರಿಕೆ ಹಾಕಿದ್ದಲ್ಲದೆ ಮಗ

ಮೋಹನ್ ಮತ್ತು ಸೊಸೆ ಅನಿತಾ ರವರು ಕುತ್ತಿಗೆ ಹಿಸುಕಿ ಸಾಯಿಸಲು ಪ್ರಯತ್ನಪಟ್ಟಿರುತ್ತಾರೆಂದು ಇದರ ಬಗ್ಗೆ ಕಾನೂನು ಕ್ರಮ ಜರುಗಿಸಬೇಕೆಂದು ದೂರು ನೀಡಿದ್ದು, ಸದರಿ ದೂರು ಅರ್ಜಿಯಲ್ಲಿನ ಅಂಶಗಳು ಸಂಜ್ಞೇಯ ಅಪರಾಧಗಳಾಗಿದ್ದರಿಂದ ಠಾಣೆಯ ಉಸ್ತುವಾರಿಯಿದ್ದ ಶ್ರೀ ಎಲ್.ಆರ್. ಮಸಗುಪ್ಪ, ಪಿ.ಎಸ್.ಐ–2 ರವರು ಠಾಣಾ ಮೊ.ಸಂ.14/2016 ಕಲಂ. 341, 323, 504 ರೆ/ವಿ 34 ಐಪಿಸಿ ರೀತ್ಯಾ ಕೇಸು ದಾಖಲು ಮಾಡಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ.

ಅರ್ಜಿದಾರರಾದ ಶ್ರೀ ಮೋಹನ್‌ರವರು ನಮ್ಮ ವಿರುದ್ಧ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ನೀಡಿರುವ ದೂರಿಗೆ ಸಂಬಂಧಿಸಿದಂತೆ ಮಾನ್ಯ ಆಯೋಗದ ಡಿವೈಎಸ್‌ಪಿರವರು ವಿಚಾರಣೆ ನಡೆಸಿ, ಅರ್ಜಿದಾರರು ನೀಡಿರುವ ದೂರುಗಳಿಗೆ ಸಂಬಂಧಿಸಿದಂತೆ ಸಂಜ್ಞೇಯ ಅಪರಾಧಗಳ ಅಡಿಯಲ್ಲಿ ಕೇಸು ದಾಖಲಿಸಿ ಕ್ರಮ ಕೈಗೊಳ್ಳದೇ, ಸಾಮಾನ್ಯ ದೂರು ಅರ್ಜಿಯಂತೆ ಪರಿಗಣಿಸಿರುವುದಾಗಿ ಹಾಗೂ ಅರ್ಜಿದಾರರನ್ನು ವಿಚಾರಣೆ ಮಾಡದೇ, ಎದುರು ಅರ್ಜಿದಾರರನ್ನು ಮಾತ್ರ ವಿಚಾರ ಮಾಡಿ, ಅರ್ಜಿದಾರರು ನೀಡಿರುವ 3 ಅರ್ಜಿಗಳಿಗೆ ಸಂಬಂಧಿಸಿದಂತೆ ಅರ್ಜಿದಾರರಿಗೆ ಅಂಚೆ ಮುಖೇನ ಹಿಂಬರಹ ಕಳುಹಿಸಿಕೊಟ್ಟು ನಿರ್ಲಕ್ಷತನ ತೋರಿರುವುದಾಗಿ ತಮ್ಮಲ್ಲಿಗೆ ನನ್ನ ವಿರುದ್ಧ ವಿಚಾರಣಾ ವರದಿ ನೀಡಿರುತ್ತಾರೆ.

ನಾನು ಅರ್ಜಿದಾರರು ನೀಡಿರುವ 3 ದೂರು ಅರ್ಜಿಗಳು ಒಂದೇ ವಿಷಯಕ್ಕೆ ಸಂಬಂಧಪಟ್ಟವಾಗಿದ್ದು, ಕೂಲಂಕುಶವಾಗಿ ಪರಿಶೀಲಿಸಿ, ಅರ್ಜಿದಾರರ ದೂರು ಅರ್ಜಿಯಲ್ಲಿನ ಅಂಶಗಳು ಸಿವಿಲ್ ಸ್ವರೂಪದ್ದಾಗಿದ್ದರಿಂದ ಹಾಗೂ ಸಂಜ್ಞೇಯ ಅಪರಾಧದ ಅಂಶಗಳು ಕಂಡುಬಂದಿರದ ಹಿನ್ನೆಲೆಯಲ್ಲಿ ಅರ್ಜಿದಾರರಿಗೆ ಸ್ವತ್ತಿನ ವಿಷಯವು ಸಿವಿಲ್ ಸ್ವರೂಪದ್ದಾಗಿದ್ದರಿಂದ ಹಾಗೂ ಈಗಾಗಲೇ ಸಿವಿಲ್ ನ್ಯಾಯಾಲಯದಲ್ಲಿ ದಾವೆ ದಾಖಲಾಗಿ ವಿಚಾರಣೆಯಲ್ಲಿರುವುದರಿಂದ ಅಲ್ಲಿಯೇ ಬಗೆಹರಿಸಿಕೊಳ್ಳುವಂತೆ ಹಾಗೂ ಸ್ಥಳದಲ್ಲಿ ಯಾವುದೇ ಅಹಿತಕರ ಘಟನೆಗೆ ಆಸ್ಪದ ನೀಡದಂತೆ ಕೋರಿ ಹಿಂಬರಹವನ್ನು ಠಾಣಾ ಪಿಸಿ–12930 ರವರ ಮೂಲಕ ಜಾರಿ ಮಾಡಲು ಕಳುಹಿಸಿಕೊಟ್ಟಿದ್ದು, ಅವರು ಸ್ವೀಕರಿಸದ ಹಿನ್ನೆಲೆಯಲ್ಲಿ ಅರ್ಜಿದಾರರಿಗೆ ಹಿಂಬರಹವನ್ನು ನೊಂದಾಯಿತ ಅಂಚೆಯ ಮೂಲಕ ಕಳುಹಿಸಿ ಜಾರಿ ಮಾಡಿರುತ್ತೇನೆಯೇ ವಿನಃ ದೂರು ಅರ್ಜಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ಲಕ್ಷತನ ವಹಿಸಿರುವುದಾಗಲೀ ಹಾಗೂ ಯಾವುದೇ ಒತ್ತಡಕ್ಕೆ ಮಣಿದು ಎದುರು ಅರ್ಜಿದಾರರಿಗೆ ಸಹಕರಿಸಿರುವುದಾಗಲೀ ಮಾಡಿರುವುದಿಲ್ಲ."

ದಿನಾಂಕ 01–10–2020 ರಂದು ಆರಕ್ಷಕ ನಿರೀಕ್ಷಕರು ಶ್ರೀ ಶ್ರೀಧರ್ ಪೂಜಾರ್ ರವರು ಹಾಗೂ ದೂರುದಾರರಾದ ಶ್ರೀಮತಿ ಅನಿತ ಹಾಗೂ ಶ್ರೀ ಮೋಹನ್ ರವರು ತಮ್ಮ ವಕೀಲರಾದ ಶ್ರೀ ದಿಲೀಪ್ ಗೌಡ ರವರ ಜೊತೆ ಆಯೋಗದ ಮುಂದೆ ಹಾಜರಾಗಿ, ಶ್ರೀಮತಿ ಅನಿತ ಹಾಗೂ ಶ್ರೀ ಮೋಹನ್ ರವರು ಅಫಿಡೆವಿಟ್ ಮೂಲಕ ಅವರ ಲಿಖಿತ ಹೇಳಿಕೆಯನ್ನು ಹಾಗೂ ಅದರೊಂದಿಗೆ ಕೆಲವು ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಮುಂದುವರೆದು, ಶ್ರೀಮತಿ ಅನಿತರವರು ತಮ್ಮ ಹೇಳಿಕೆಯನ್ನು ಆಯೋಗದ ಮುಂದೆ ನೀಡಿರುತ್ತಾರೆ. ಸದರಿಯವರ ಹೇಳಿಕೆಯು ಈ ಕೆಳಕಂಡಂತೆ ಇದೆ:

"I am staying in ground floor of Municipal Khata No.17, 1st Cross, Nagappa Street, Palace Guttahalli, Bengaluru: 560 003 along with my husband and family.

This is a two floor house in which my in-laws are staying in the first floor with Smt Usha Ranganath and I am residing in the ground floor with my family. My Father-In-Law has expired.

Regarding the property where I am staying, a Suit is filed wherein the court has given an ad-interim temporary injunction not to alienate or not to create encumbrance over the Suit scheduled property in any manner pending before the Court. While the matter stands at that stage Smt Usha Ranganath and her husband Sri Ranganath took up renovation work of the first floor. My husband Sri G. Mohan has brought this to the notice of the Inspector of Police, Vyalikaval Police Station requesting to stop the renovation work in view of the stay order granted by the Civil Court in O.S No.1703/2015. No action has been taken on this complaint. Thereafter another complaint was filed by my husband Sri G. Mohan on 02.01.2016 before the Inspector of Police, Vyalikaval Police Station, Bengaluru regarding threat given to my husband and family and also showing my husband as minor although he was 32 years and getting the land in Survey No.9 of Nelathahalli Village, Kothagere Hobli, Kunigal Taluku, Tumkuru District sold off. On this complaint also no action was taken. On 26.01.2016 another complaint was filed by my husband to the Inspector of Police, Vyalikaval Police Station, Bengaluru regarding Smt Usha Ranganath and Sri Ranganath coming to our house on 26.01.2016 in the morning, abusing them and giving life thread to vacate the house. No action was taken on this complaint also by the Inspector of Police, Vyalikaval Police Station, Bengaluru.

Thereafter I approached Karnataka State Human Rights Commission with a complaint dated: 17.02.2016 for not taking any action by the Inspector of Police, Vyalikaval Police Station, Bengaluru on the three complaints lodged. It was after that, an endorsement dated: 21.04.2016 was issued to my husband Sri G. Mohan mentioning that the above stated all the three complaints are civil in nature and therefore this complaints are closed.

I reliably learnt that a complaint given is with regard to the matter pending before the Civil Court is civil in nature only after receiving an endorsement dated: 21.04.2016. I state that as regards the action taken on the complaint filed by me and my husband before Vyalikaval Police Station, I learnt that only after receiving endorsement dated: 21.04.2016. I state that on the complaint given by mother-in-law Smt Jayamma an FIR was registered and that this FIR has been registered by the Sub-Inspector of Police and not the Inspector. I got to know this as a matter internal to the Police Department."

ತದನಂತರ, ದಿನಾಂಕ 28–10–2020 ರಂದು ದೂರುದಾರರಾದ ಶ್ರೀಮತಿ ಅನಿತ ಹಾಗೂ ಶ್ರೀ ಮೋಹನ್ ರವರು ಹಾಗೂ ಆರಕ್ಷಕ ನಿರೀಕ್ಷಕರು ಶ್ರೀ ಶ್ರೀಧರ್ ಕೆ ಪೂಜಾರ್ ರವರು ಆಯೋಗದ ಮುಂದೆ ಹಾಜರಾಗಿ, ಶ್ರೀ ಶ್ರೀಧರ್ ಕೆ ಪೂಜಾರ್ ರವರು ದಿನಾಂಕ 28–10–2020 ರ ಪತ್ರದೊಂದಿಗೆ ಮೇಲೆ ಉಲ್ಲೇಖಿಸಲಾದ ಲಿಖಿತ ಹೇಳಿಕೆಯ ಪ್ರತಿಯನ್ನು ಸಲ್ಲಿಸಿರುತ್ತಾರೆ.

ತದನಂತರ, ದಿನಾಂಕ 07–01–2021 ರಂದು ಶ್ರೀ ಶ್ರೀಧರ್ ಕೆ ಪೂಜಾರ್, ಆರಕ್ಷಕ ನಿರೀಕ್ಷಕರು ರವರು ಆಯೋಗದ ಮುಂದೆ ಹಾಜರಾಗಿ ಅವರ ಹೇಳಿಕೆಯನ್ನು ನೀಡಿರುತ್ತಾರೆ. ಸದರಿಯವರ ಹೇಳಿಕೆಯು ಈ ಕೆಳಕಂಡಂತೆ ಇದೆ:

"On 30.12.2015, I did not receive directly any complaint from Smt. G.R.Anitha/G.Mohan. The complaint dated 30.12.2015 was sent through post and was received by Sri Venkatachalaiah, ASI and the said petition was registered as Station Petition No.2/2016 on 01.01.2016. I have registered Station Petition No.3/2016 on 12.01.2016. I have given notice dated 30.01.2016 mentioning Petition No.20/2016 in the reference of the notice. I have however given endorsement dated 21.04.2016 mentioned in the reference at serial number 3 as Station Petition No.20/2016. I state that this mistake has been due to slip of eye. FIR No.14/2016 registered by PSI on 29.01.2016 has come to my notice. I state that there is no relation between my sending notice dated 30.01.2016 on the three petitions registered in 2/2016, 3/2016 and 20/2016 and registration of a case in FIR No.14/2016. I have given notice dated 30.01.2016 to Sri Ganganarasegowda, Smt Jayamma, Smt Usha Sri P.V.Ranganath and Sri Lakshmikanth. I deny that I have given endorsement

dated 21.04.2016 because Smt Anitha GR /G.Mohan had filed complaint dated 17.02.2016 before the Karnataka State Human Rights Commission. I have given endorsement for Petition No.2/2016 on 21.04.2016 because the petitions and complaints are enquired on seniority of their receipt in the police station and accordingly this petition may have got delayed in sending till 21.04.2016. I know that all the three petitions pertains to one subject and therefore, I enquired them together. I state that the FIR registered in Crime No.14/2016 on 29.01.2016 on a complaint received on the dame day was by PSI and he after registration of the case informed me. I deny that there was pressure or monetary benefit given to me not to take up three complaints which are registered as 2/2016, 3/2016 and 20/2016. I deny that I have hand in registration of false FIR No.14/2016. I deny that I have registered FIR No.14/2016 out of malice despite knowing the matter pertaining to FIR as well as three petitions belong to the same family. I deny that I have violated the Hon'ble Supreme Court guidelines relating to preliminary inquiry to be conducted within seven days pertaining to family as given in Lalithakumari's case.

I have made enquiry on Petition No.3/2016 and I have given endorsement dated 21.04.2016. I deny that I have not looked into the allegations of fraud and filing of false complaint mentioned in the complaint registered in Petition No.3/2016. As regards the matter in Petition No.3/2016, I found that the jurisdiction of Vyalikaval police station is there and therefore, I made the enquiry. It is not correct to state that despite the complaint registered on 26.01.2016, in Petition No.20/2016 mentioning about house trespass which is a cognizable offence I have not registered a criminal case. I deny that Sri Ranganath, Sri Ganganarasegowda, Smt Jayamma and others are my friends and therefore, I have registered FIR No./14/2016 on a false complaint given by them."

ದೂರರ್ಜಿ, ವರದಿ, ದೂರುದಾರರ ಹಾಗೂ ಎದುರುದಾರರ ಹೇಳಿಕೆಗಳು ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗಿ, ಪೊಲೀಸ್ ನಿರೀಕ್ಷಕರಾದ ಶ್ರೀ ಶ್ರೀಧರ ಪೂಜಾರ್ ರವರು ದೂರುದಾರರಾದ ಶ್ರೀಮತಿ ಅನಿತಾ ಹಾಗೂ ಶ್ರೀ ಮೋಹನ್ ರವರು ದಿನಾಂಕ 30–12–2015, 02–01–2016 ಮತ್ತು 26–01–2016 ರಂದು ನೀಡಿರುವ ಮೂರು ದೂರುಗಳನ್ನು ಅಸಂಜ್ಞೇಯ ಪ್ರಕರಣಗಳೆಂದು ನೋಂದಾಯಿಸಿ, ದಿನಾಂಕ 21–04–2016 ರಂದು ಮೂರು ಪ್ರಕರಣಗಳಿಗೆ ಒಂದೇ

ಹಿಂಬರಹ ನೀಡಿದ್ದು, ((2014) 2 SCC 1) ಲಲಿತಕುಮಾರಿ ವಿರುದ್ಧ ಉತ್ತರ ಪ್ರದೇಶ ಸರ್ಕಾರದ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಕೌಟಂಬಿಕ ವ್ಯಾಜ್ಯಗಳಲ್ಲಿ 7 ದಿನಗಳೊಳಗಾಗಿ ಪ್ರಾರ್ಥಮಿಕ ವಿಚಾರಣೆ ಮಾಡಬೇಕೆಂಬುದರ ಮಾರ್ಗಸೂಚಿಯನ್ನು ಪೊಲೀಸ್ ನಿರೀಕ್ಷಕರಾದ ಶ್ರೀ ಶ್ರೀಧರ ಪೂಜಾರ್ ರವರು ಅನುಸರಿಸಿರುವುದಿಲ್ಲವೆಂಬುದು ಕಂಡು ಬರುತ್ತದೆ.

ದಿನಾಂಕ 02/01/2016 ರಂದು ದೂರುದಾರರಾದ ಶ್ರೀ ಮೋಹನ್ ರವರು ನೀಡಿರುವ ದೂರಿನ ಉಲ್ಲೇಖ-1ರ ವಿಷಯವು ಸಂಜ್ಞೇಯ ಅಪರಾಧವಿದ್ದರು ಸಹ ಸಂಜ್ಞೇಯ ಅಪರಾಧದ ಅಡಿಯಲ್ಲಿ ದೂರರ್ಜಿಯನ್ನು ದಾಖಲಿಸದೆ ಪೆಟಿಷನ್ ನಂ. 3/2016 ರಂತೆ ಪ್ರಕರಣವನ್ನು ದಾಖಲು ಮಾಡಿ, ಈ ದೂರರ್ಜಿಗೆ ಸಂಬಂಧಿಸಿದಂತೆ ಶ್ರೀ ಶ್ರೀಧರ ಪೂಜರ್, ಪೊಲೀಸ್ ನಿರೀಕ್ಷಕರು ರವರು ಯಾವುದೇ ವಿಚಾರಣೆಯನ್ನು ಕೈಗೊಳ್ಳದೇ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಮುಂದುವರೆದು, ದಿನಾಂಕ 26-01-2016 ರಂದು ದೂರುದಾರರು ನೀಡಿರುವ ಮೂರನೇಯ ದೂರಿನಲ್ಲಿ, ದೂರುದಾರರಾದ ಶ್ರೀ ಮೋಹನ್ ರವರ ತಂಗಿ ಉಷಾರಂಗನಾಥ ಹಾಗೂ ಆಕೆಯ ಗಂಡ ರಂಗನಾಥ ರವರು ದೂರುದಾರರ ಮನೆಯನ್ನು ಪ್ರವೇಶಿಸಿ, ದೂರುದಾರರನ್ನು ಮನೆಯಿಂದ ಹೊರಹಾಕಲು, ಶ್ರೀ ರಾಜೇಂದ್ರ ಪ್ರಸಾದ್, ಡಿವೈ.ಎಸ್.ಪಿ. ರವರ ಹೆಸರು ಬಳಸಿ ಅವರ ಸಹಾಯದಿಂದ ದೂರುದಾರರನ್ನು ಜೈಲಿಗೆ ಕಳುಹಿಸುವುದಾಗಿ ಬೆದರಿಕೆ ಹಾಕಿದ್ದು ಹಾಗೂ ಚಾಕುವಿನಿಂದ ಇರಿದು ಕೊಲ್ಲುವುದಾಗಿ ಜೀವ ಬೆದರಿಕೆ ಹಾಕಿರುವ ದೂರನ್ನು ಸಂಜ್ಞೇಯ ಅಪರಧಾದ ಅಡಿಯಲ್ಲಿ ದೂರರ್ಜಿಯನ್ನು ದಾಖಲಿಸದೆ ಪೆಟಿಷನ್ ನಂ: 20/2016 ರಂತೆ ಪ್ರಕರಣವನ್ನು ದಾಖಲು ಮಾಡಿ, ವೈಯಾಲಿಕಾವಲ್ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರಾದ ಶ್ರೀ ಶ್ರೀಧರ ಪೂಜಾರ್ ರವರು ಸದರಿ ಪ್ರಕರಣದಲ್ಲಿ ಎದುರುದಾರರನ್ನು ಮಾತ್ರ ವಿಚಾರಣೆ ಮಾಡಿ ಹಾಗೂ ಮೇಲೆ ಹೇಳಲಾದ ಮೂರು ದೂರುಗಳಿಗೆ ಸಂಬಂಧಿಸಿದಂತೆ ದೂರುದಾರರನ್ನು ವಿಚಾರಣೆ ಮಾಡದೇ, ದಿನಾಂಕ 21-04-2016 ರಂದು ದೂರುದಾರರಿಗೆ ಅಂಚೆಯ ಮುಖೇನ ಹಿಂಬರಹ ನೀಡಿ ಕರ್ತವ್ಯ ನಿರ್ಲಕ್ಷತೆ ತೋರಿರುವುದು ಕಂಡುಬರುತ್ತದೆ.

ಆದ್ದರಿಂದ, ಅಂದಿನ ವೈಯಾಲಿಕಾವಲ್ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರಾದ ಶ್ರೀ ಶ್ರೀಧರ ಪೂಜಾರ್ (ಹಾಲಿ ಪೊಲೀಸ್ ನಿರೀಕ್ಷಕರು, ಸಿ.ಸಿ.ಬಿ) ರವರು ಅವರ ಕರ್ತವ್ಯ ನಿರ್ವಹಿಸುವಲ್ಲಿ ಕರ್ತವ್ಯ ನಿರ್ಲಕ್ಷತೆ ಎಸಗಿರುವುದು ಕಂಡುಬರುವುದರಿಂದ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ನಡೆಸುವಂತೆ ಡಿಜಿ ಮತ್ತು ಐಜಿಪಿ, ಬೆಂಗಳೂರು ರವರಿಗೆ ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಡಿಜಿ ಮತ್ತು ಐಜಿಪಿ, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಡಿಜಿ ಮತ್ತು ಐಜಿಪಿ, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2007 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ 20–04–2021 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.